Regd No B G 155 Sri 9—4—1965

ಸತ್ಯವಾದಿ

48 th Year
Satyavadi
DAILY
MYSORE

ಸಂಸ್ಥಾಪಕರು — ಅಂಮನೆ ಸಿಂಸ್ಕೇದಾರ್ ಎಂ ಏ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರಿನಿ ಎಂ ಎಸ್ ಕೃಷ್ಣರಾವ್ 2 ಪೈಸೆ

ಪೋಸ್ಟಲ್ ಸ್ಟಾಂಪುಗಳ ಮಾರಾಟ

ಲಂಡನ್ — ಬ್ರಿಟನ್ನಿನ ಪ್ರಸಿದ್ಧ ಸ್ಟಾಂಪು ತಯಾರಿಕಾ ಸಂಸ್ಥೆಯೊಂದು ಶೀಘ್ರದಲ್ಲಿ ಹೊರಡಿಸಲಿರುವ ಎಲ್ಲಾ ಸ್ಟಾಂಪುಗಳನ್ನೂ ಜೊತೆಗೆ 50000 ಪೌಂಡುಗಳ ಚೆಕ್ಕನ್ನೂ ನ್ಯಾಷನಲ್ ಪೋಸ್ಟಲ್ ಮ್ಯೂಜಿಯಂ ಸ್ಥಾಪಿಸಲು ಪೋಸ್ಟಮಾಸ್ಟರು ಜನರಲರಿಗೆ ಕೊಟ್ಟಿರುವರು — ಇದರಲ್ಲಿ ಅಪೂರ್ವವಾದ ಸ್ಟಾಂಪುಗಳಿವೆ.

★

ಕಮ್ಯೂನಿಸ್ಟರ ಅಭಿಪ್ರಾಯ

ಭುವನೇಶ್ವರ — ಸಂಕಾರವು ಹೇಳಿ ಅಬ್ದುಲ್ಲಾಂತಹವನ್ನು ಸಹಿಸುತ್ತಿದ್ದರೂ ಪಾಪ ಕಮ್ಯೂನಿಸ್ಟ್‌ನನ್ನು ಹಿಂಸೆ ಮಾಡುತ್ತಿದೆ ಎಂದು ಬಲ ಕಮ್ಯೂನಿಸ್ಟ ಸದಸ್ಯ ರಾಮಚಂದ್ರ ರಾಂ ಮೊನ್ನೆ ಶಾಸನ ಸಭೆಯಲ್ಲಿ ಹೇಳಿದರು.

★

ಸ್ಮೃತಿ ಕಾರ್ಯ

ಆಗ್ರಾ — 1957 ರಿಂದ ಆಗ್ರಾ ಹಿಂದಿ ಇನಸ್ಟಿಟ್ಯೂಟಿನವರು 1100 ಅಪೂರ್ವ ಹಿಂದಿ, ತೆಲುಗು, ತಮಿಳ್, ಮತ್ತಿತರ ಭಾಷೆಗಳ ಕೈ ಬರಹಪ್ರತಿಗ್ರಂಥಗಳನ್ನು ಶೇಖರಿಸಿದ್ದಾರೆ

★

ಶ್ರೀ ರಾಮೋತ್ಸವ

ಮೈಸೂರು ಒನಪಹಾಸ್ಯ ಸಂಸ್ಥೆಯಲ್ಲಿರುವ ಶ್ರೀ ರಾಮಮಂದಿರದಲ್ಲಿ ತಾ || 10 ರಿಂದ ತಾ || 21 ರವರೆಗೆ ಶ್ರೀ ರಾಮೋತ್ಸವವು ನಡೆಯುತ್ತದೆ

★

ಶಾಲೆಯ ಪಂಚಾಂಗ

ವೈದ್ಯ ಶಿಪಾಯಿಗಳ
ಆರೋಗ್ಯವು ಹಾಳಾದ್ದರಿಂದ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಸ್ಥಂಪಕೃಷ್ಣಜೋಯಿಸರಿಂದ

10 ಶನಿವಾರ ನವಮಿ ಪುಷ್ಯ
ಶಾಲೆ ಶ್ರೀ ರಾಮ ನವಮಿ ಪ್ರಯುಕ್ತ
ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

ಪ್ರವಾಸ ಕಚೇರಿ

ಟೋಕಿಯೊ — ಜಪಾನಿನಲ್ಲಿ ಭಾರತ ಪ್ರವಾಸ ಕಚೇರಿಯು ಮೊನ್ನೆ ಉದ್ಘಾಟಿಸಲಾಯಿತು

★

ಬೆಂಗಳೂರು — ಕ್ಷಿಪ್ರಕಂಪಾಂಶ ಹೆಚ್ಚಿಸಬೇಕೆಂಬ ಜೋಜನೆಯು ಶಾಸನ ಸಭೆಯಲ್ಲಿ ಮೊನ್ನೆ ಬಲಯುತವಾಗಿ ನಿರೋಧಿಸಲಾಯಿತು — ಭೂ ಕಂದಾಯ ಸರ್ವೆ ಮತ್ತು ರೀಸೆಟಲ್ಮೆಂಟು ಸಂಬಂಧದ ಖರ್ಚಿನನ್ನು ವಾಪಸ್ಸು ಪಡೆಯುವ ಸಂ ಶಾಸನ ಸಭೆಯ ವಿವಿಧ ಪಕ್ಷಗಳ ನಾಯಕರು ಮುಖ್ಯ ಮಂತ್ರಿಗಳಿಗೆ ಒರೆದಿರುವರು.

★

ಬೆತಲೆ ಮಹಿಳೆ

ವ್ಯೂನಿಕ್ — ಬೀದೇರಿಯೂ ರಾಜಧಾನಿಯಲ್ಲಿ ಒಬ್ಬಳು ಬೆತ್ತಲೆ ಮಹಿಳೆಯು ಮೊನ್ನೆ ಸುತ್ತಾಡುತ್ತಿದ್ದಳು : ಅವಳನ್ನು ಪತ್ತೆಗಿರಿ ಮಾಡಲು ಹೋದ ಪೋಲೀಸರನ ಕೈ ಕಚ್ಚಿದಳು : ಕಡೆಗೂ ಅವಳ ತೀವ್ರ ಪ್ರತಿಭಟನೆಯನ್ನು ಲಕ್ಷಿಸದೆ ಹಿಡಿದು ಸೈಕಿಯಾಟ್ರಿಕ್ ಕ್ಯಾಂಪಿಗೆ ಕಳುಹಿಸಲಾಯಿತು.

★

ಭೂಮಿಯ ಬಿರುಕು

ಕಂಜಾಪುರ — ಜನವರಿಯಲ್ಲಿ ಗಾತ್ರವಾದಲ್ಲಿ ಭೂಮಿ ಹುಸಿಗಳು ಬಿರುಕು ಬಿಡುತ್ತಿರುವುದು ಅಲ್ಲಿಯ ನಾನೂರು ನಿವಾಸಿಗಳು ಭಯಗ್ರಸ್ತರಾಗಿರುವಂತೆ — ಅಲ್ಲಿಯ ವಿಶೇಷವೆಂದರೆ, ಭೂಮಿಯು ನೀರು ಹಾಲಿನಂತೆ ಬಿಳುಗಿದೆ.

★

ಬೆಂಗಳೂರು — ನಗರದ ಬಸ್ ಸರ್ವಿಸ್ಸು ದರವನ್ನು ಹೆಚ್ಚಿಸುವ ಯೋಜನೆಯನ್ನು 27 ನೇ ಡಿವಿಜರ್ ತೆರಿಗೆದಾರರ ಸಂಘ ವಿರೋಧಿಸಿದೆ

ಎಚ್ಚರಿಕೆ ಕಾರ್ಯ

ವಾಷಿಂಗ್ಟನ್ — ದಕ್ಷಿಣ ಮತ್ತು ಆಗ್ನೇಯ ಏಷ್ಯಾಗಳು ಕಮ್ಯೂನಿಸ್ಟ ಹಿಡಿತಕ್ಕೆ ಸಿಕ್ಕದಂತೆ ಬಲಯುತವಾದ ಅಭಿವೃದ್ಧಿ ಮಾಡಲು ಅಮೇರಿಕಾ ಸಿದ್ಧವಿದೆ ಎಂದು ಪ್ರಕಟವಾಗಿದೆ.

★

ಪ್ರತಿಭಟನಾ ಉದಾಸ

ಬೆಂಗಳೂರು — ಭೂಕಂದಾಯ ಪುನರ್ವಿಮರ್ಶೆಯನ್ನು ಪ್ರಭಟಿಸಿ ಶಾಸನ ಸಭೆಯ ವಿರೋಧ ಪಕ್ಷದ 5 ಮಂದಿ ಸದಸ್ಯರು ಸಭಾ ತ್ಯಾಗದಲ್ಲಿ ಮೊನ್ನೆ ಪಾಲ್ಗೊಂಡಿಸಿದರು

★

ಕಷ್ಟ ಕದ್ದವರಿಗೆ ಶಿಕ್ಷೆ

ನ್ಯೂಯಾರ್ಕ್ — ಕಳೆದ ಆಕ್ಟೋಬರಿನಲ್ಲಿ ನ್ಯಾಷನಲ್ ಹಿಸ್ಟರಿ ಮ್ಯೂಜಿಯಂನಲ್ಲಿ ವಿಶ್ವದ ಅತಿ ದೊಡ್ಡ ಸ್ಟಾರ್ ಆಫ್ ಇಂಡಿಯಾ ಕಷ್ಟ ಮತ್ತು ಇತರ 22 ರತ್ನಗಳನ್ನು ಕದ್ದ 3 ಮಂದಿಗೆ ತಲಾ 3 ವರ್ಷ ಸಜೆ ವಿಧಿಸಲಾಯಿತು

★

ಕಪ್ಪು ಕೆಲಸ

ಹೇಳಿ ಅಬ್ದುಲ್ಲರಿಗೆ ಪ್ಯಾಸಪೋರ್ಟು ಕೊಟ್ಟಿದ್ದು ಹಿಂದು ಕಪ್ಪು - ಕೆಲಸವೆಂದು ಶ್ರೀ ಕೃಪಾಲಿನಿಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ

★

ಕೇಸ್ ರಿಜಿಸ್ಟರಾಗಿದೆ

ನವದೆಹಲಿ — ಕೂಚಬಿಹಾರಿನ ದಾರೈಜಾನಾದಲ್ಲಿ ಪಾಕಿಸ್ತಾನಿ ಬಾವುಟ ದಂತಿದ್ದ ಧ್ವಜವನ್ನು ಹಾರಿಸಿದ ಬಗ್ಗೆ ಕೇಸ್ ರಿಜಿಸ್ಟರು ಮಾಡಿಕೊಳ್ಳಲಾಗಿದೆಯೆಂದೂ, ತನಿಖೆ ನಡೆಯುತ್ತಿದೆಯೆಂಯೆಂದೂ ಮೊನ್ನೆ ಲೋಕಸಭೆಯಲ್ಲಿ ತಿಳಿಸಲಾಯಿತು.

★

ವಾರ್ತಾ ವಿಶೇಷಗಳು

ಮಾಸ್ಕೋ — ಕಾಶ್ಮೀರವು ಭಾರತದ ಒಂದು ಭಾಗವೆಂಬ ತಮ್ಮ ನಿಲುವನ್ನು ಮತ್ತೆ ರಷ್ಯಾ ಅಧಿಕಾರಿಗಳು ತಮ್ಮ ಧರವಸೆಯನ್ನು ಭಾರತ ಸರಕಾರಕ್ಕೆ ತಿಳಿಸಿರುವುದಾಗಿ ಪ್ರಕಟವಾಗಿದೆ

—

ಬೆಂಗಳೂರು — ಇಂಗ್ಲೀಷು ವಿಚಾರದಲ್ಲಿ ಶಾಸನ ತಯಾರಿಸಲು ನೇಮಿಸಲಾಗಿರುವ 7 ಮಂದಿ ಸಮಿತಿಯಲ್ಲಿ ದಕ್ಷಿಣ ಭಾರತದವರಿಲ್ಲದಿರುವುದು ಏ ಆತಾದಿ ಸಲಾಗಿದೆ

ಪ್ರತಿಯೊಬ್ಬರೂ ಕಾಲರಾ
ಇನಾಕ್ಯುಲೇಷನ್ ಹಾಕಿಸಿಕೊಂಡು
ಮೈಸೂರು ಪೌರಸಭೆಯು ಕಾಲರಾ
ನಿವಾರಣೆ ಕಾರ್ಯದಲ್ಲಿ ಸಹಕರಿಸಬೇಕು

ಮೈಸೂರಿನಲ್ಲಿ ಕಾಲರಾ

ಮೈಸೂರು ನಗರದಲ್ಲಿ ಕಾಲರಾ ಸೋಂಕು ಉಂಟಾಗಿದೆ ಇದರ ನಿವಾರಣೆಗೆ ಪರಿಣಾಮಕಾರಿಯಾದ ಕ್ರಮ ತೆಗೆದುಕೊಳ್ಳಬೇಕು ಪೌರಸಭೆ ಕಮಿಷನರು ಹಾಗೂ ಆರೋಗ್ಯಾಧಿಕಾರಿಗಳವರು ಈ ವಿಚಾರದಲ್ಲಿ ಮುತುವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ, ಹೊಟೆಲುಗಳು ಬೊಕ್ಕಟಪಾಲಿಂಎಳೆ ಹಾಗೂ ಬಸಿ ಆಹಾರ ಕೊಡುವಲ್ಲಿ ನೋಡಿಕೊಳ್ಳಬೇಕು ಎಂದು ಡಾ॥ ಬಿ ಬಿ ಪಾಸ್ ಅವರು ಕಳೆದ ಸಂಜೆ ಮೈಸೂರು ಪೌರಸಭೆಯಲ್ಲಿ ತಿಳಿಸಿದರು

ಕಾಲರಾ ನಿವಾರಣೆಗಾಗಿ ಕೆಲಸ ಮಾಡುತ್ತಿದ್ದೇವೆ ಈಗ ಹೊಟೆಲು ಮುಚ್ಚಿಸುವ ಪರಿಸ್ಥಿತಿ ಇಲ್ಲ ಅಂಥ ಪರಿಸ್ಥಿತಿ ಉದರೆ ಮುಚ್ಚಿಸುತ್ತೇವೆ ಟ್ಟಿಎಂ ಬುದಾಗಿ ಕವಿಯಿಸರಾದ ಶ್ರೀ ಜೆ ಟಿ ವಿಶ್ವನಾಥಯ್ಯನವರು ನುಡಿದರು

30 ನಾವೆಂ ಮಂದಿಗೆ ಇನಾಕ್ಯುಲೇಷನ್ ಮಾಡಿರುವುದಾಗಿ ಆರೋಗ್ಯಾಧಿಕಾರಿಯವರು ನುಡಿದರು

ರಾಜಧರ್ಮ

(ದಂಡವುಂದುವುದು)

ರಾಜದಂಡವನ್ನು ಉಂಡಯೋಗಿಸದಿದ್ದರೂ, ಅಥವಾ ಕ್ರಮತಪ್ಪಿ ಉಪಯೋಗಿಸಿದರೂ, ಬ್ರಾಹ್ಮಣಾದಿ ಸಮಸ್ತ ಜಾತಿಗಳೂ ಪಂಪ್ರದಾಯಭ್ರಷ್ಟವಾದ ದುಷ್ಕೃತ್ಯಗಳಿಂದ ಕೆಟ್ಟುಹೋಗಬಹುದು ; ಸಮಸ್ತ ಶಾಸ್ತ್ರ ನಿಯಮಗಳೂ ಹಾಳಾಗಬಹುದು ; ಕಳ್ಳತನ ದರೋಡೆ ಮುಂತಾದ ದುರ್ನಡತೆಗಳಿಂದ ಸಮಸ್ತ ಜನಾಂಗ ಕ್ರೋಧ ಕೋಲಾಹಲಗಳುಂಟಾಗಬಹುದು.

ಸತ್ಯಪಾಲನೆಯಾಗಿಯೂ ನ್ಯಾಯವಾಗಿ ವಿಚಾರ ಮಾಡತಕ್ಕವನೂ, ಪಂಡಿತನೂ, ಧರ್ಮ-ಶಾಸ್ತ್ರ-ಅರ್ಥಗಳೆಂಬ ತ್ರಿವರ್ಗದಿಂದ ಅಭಿವೃದ್ಧಿ ಹೊಂದುತ್ತಾನೆ : ಅದಕ್ಕೆ ವಿರುದ್ಧವಾಗಿ ಶಾಸ್ತ್ರಾಭಿಲಾಷೆ, ಕೋಪ, ಕಪಟ ಈ ಕ್ರೂರಿಗಳುಳ್ಳ ಅವನು ಕ್ರಮತಪ್ಪಿ ಅನ್ಯಾಯವಾಗಿ ಶಿಕ್ಷಿಸಿದಪಕ್ಷದಲ್ಲಿ ಆ ದಂಡದಿಂದಲೇ ಅವನು ನಾಶಹೊಂದುತ್ತಾನೆ.

ರಾಜನು ಶಮೆಯುಳ್ಳವನು ದುಃಖಕ್ಕಾದ ತೇಜಸ್ಸು ; ಅದುದರಿಂದ ಶಾಸ್ತ್ರಾಭ್ಯಾಸದಿಂದ ಕುಶಲಬುದ್ಧಿಗಳಿಸಿದವನು ಆ ದಂಡವನ್ನು ಧರಿಸಲು ಅರ್ಹನಾಗಿರುತ್ತಾನೆ : ಅನ್ಯಥಾನ್ಯಾಯವನ್ನು ತೊರೆದ ಅರಸನನ್ನು ಬಂಧುಸದೃಶನಾಗಿ ಆ ದಂಡವು ನಾಶಗೊಳಿಸುವುದು.

ಬಂಧುಸದೃಶನಾದ ರಾಜನನ್ನು ನಾಶಗೊಳಿಸಿದ ನೋಡಿ ಆ ದಂಡವು ಅವನ ಮಾರ್ಗವನ್ನೂ, ಐಶ್ವರ್ಯವನ್ನೂ, ಭೂಲೋಕವನ್ನೂ ಜಯ-ವಿಜಯಗಳಿಂದ ಕೂಡಿದ ಪ್ರಪಂಚವನ್ನೂ ಆಕಾಶದಲ್ಲಿ ಹರಿಸುವ ಜಾಣರ ನೊಸಲಾದವರನ್ನೂ ಮುನಿಗಳನ್ನೂ ದೇವತೆಗಳನ್ನೂ ಪೀಡಿಸುತ್ತದೆ.

ಮಂತ್ರಿ, ಸೇನಾಪತಿ, ಪುರೋಹಿತ ಮುಂತಾದ ಸಹಾಯುಳ್ಳವನಿಲ್ಲದ ಮೂಢನು ಲೋಭಿಯೂ, ಶಾಸ್ತ್ರಾಭ್ಯಾಸದಿಂದ ಬುದ್ಧಿಯನ್ನು ತಿದ್ದಿಕೊಳ್ಳದವನೂ ಸ್ವೇಚ್ಛೆನಾದವನಾದ ಏಷಯುಳ್ಳಕ್ರಿಯುಳ್ಳವನೂ ಆದ ರಾಜನಿಂದ ಆ ದಂಡವು ನ್ಯಾಯಕಾರ್ಯದಲ್ಲಿ ಉಪಯೋಗಿಸಲ್ಪಡಲಾರದು.

ಕೈವಶದಿಂದ ಅವನು ಎಂಥ ಧನವಾದರೂ ಕೊಡಿಸಬಲ್ಲಂಥ ಸಮಸ್ತ ಬ್ರಾಹ್ಮಣಾದಿ ಜಾತಿಗಳಿಗೂ, ಬ್ರಹ್ಮಚಾರಿಯೇ ಮೊದಲಾದ ಆಶ್ರಮಿಗಳಿಗೂ ಸೃಷ್ಟಿರ್ಕರನು ಅವನನ್ನು ರಕ್ಷಕನನ್ನಾಗಿ ಸೃಷ್ಟಿಸುತ್ತಾನೆ.

ದುಷ್ಟ ವೇದಗಳನ್ನು ಬಲ್ಲ ಬ್ರಾಹ್ಮಣಾದಿ ಅರ್ಥಶಂಕಿತರಾಗಿ ಆ ವೇದಗಳನ್ನೂ, ಕ್ಷತ್ರಿಯಾದಿ ಮುಖಾಮುಖಿಯಾಗಿ ಬಾಧ ಶಾಶ್ವತವಾದ ನೀತಿ ವಿದ್ಯೆ ಅಂದರೆ ಅರ್ಥಶಾಸ್ತ್ರವನ್ನೂ, ವೇದತ್ರಯಬಲ್ಲವನಿಂದ ಮುಖಮುಖಿಗಳಲ್ಲಿ ಮಾಡಿ ಏಷಣತ್ರಯವನ್ನು ಶಾಂತಗೊಳಿಸಿದ ಪುರುಷಾರ್ಥ ಸಂಬಂಧವಾದ ಅಧ್ಯಾತ್ಮ ವಿದ್ಯೆಯನ್ನೂ, ಅನೂಚಾನ ವೃತಶೀಲ ವಿದ್ವತ್ ವೈಶ್ಯ, ಕೃಷಿಕ ಮೊದಲಾದವರಿಂದ ಕೃಷಿ-ಕ್ರಿಯಾವಿಕ್ರಯ-ವಾಣಿಜ್ಯ-ವಸ್ತುಪಾಲನಾದಿ ಲೋಕವೃತ್ತಿಯನ್ನೂ ವಿಷಯುಗಳನ್ನೂ ಅಭ್ಯಾಸಮಾಡಿಸಬೇಕು : ರಾಜನು ದುಃಖಿತರಾಗಿ ಮಾಡಿಸುವ ಕಾರ್ಯದಿಂದ ಹುಟ್ಟುವ ಹಣ್ಯ ವೃತಗಳನ್ನೂ, ಕೋಪದಿಂದ ಹುಟ್ಟುವ ಏಷು ವೃತಗಳನ್ನೂ ಪ್ರಯತ್ನದಿಂದ ಬಿಡತಕ್ಕದ್ದು.] ಮುಂದುವರಿಯುವುದು

[ಪುನಸ್ಮೃತಿಯಿಂದ ಸಂಗ್ರಹಿಸಿದೆ] ಎ. ನ. ಅಯ್ಯಂಗಾರ್

Help The Gorakshana

"ಗೋರಕ್ಷಣ" ಕ್ಕೆ ಬೆಂಬಲಿಗರಾಗಿರಿ

ಶ್ರೀ ಧರ್ಮಾಚಾರ್ಯ ಜಗದ್ಗುರು ಮಹಾರಾಜ್ಯರವರು, ಶ್ರೀ ಶೃಂಗೇರಿ ಜಗದ್ಗುರು ಮಹಾರಾಜ್ಯರವರ ಆಜ್ಞಾನುಸಾರ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ, ವರ್ಧನೆಯು, ಶಾಶ್ವತವಾಗಿ ನಡೆಯುವ ದೃಷ್ಟಿಯಿಂದ ಕೂಡಿದ ಏಕೈಕ ದೃಢಾಧಾರ ಸಂಸ್ಥೆಗೆ

ವುಡ್‌ಲಾಂಡ್ಸ್ ಯಶಸ್ವಿ 3 ನೇ ವಾರ

ಶಿನ

ಬೊಂಬಾಯಿ.ಸಲ್ಲಿ ಲಕ್ಷಾಂತರ ಜನ ನೋಡಿ ಮುಕ್ತ ಕಂಠದಿಂದ ಹೊಗಳುತ್ತಿರುವ

ಅತ್ಯದ್ಭುತ ಹಿಂದಿ ಚಿತ್ರ ೦೫

ಬಹು ಬೇಟಿ ★ Bahu Beti

ನಾಕ್ಯ- ಅಶೋಕ್‌ಕುಮಾರ್, ವೈಜಯಂತಿಮಾಲ್, ಜಾಯ್ ಮುಖರ್ಜಿ, ಪ್ರಾಣ್

ಪ್ರತಿದಿನ 3 ಪ್ರದರ್ಶನಗಳು

ಆಪೆರಾ ಜಯಪ್ರದ 2 ನೇ ವಾರ

ಅತ್ಯದ್ಭುತ ತಮಿಳು ಚಿತ್ರ — ದಿನ 3 ಆಟಗಳು

ಪೂಜೆಕ್ಕು ವಂದ ಮಲರ್

ತಾರಾಗಣ — ಜೆಮಿನಿ ಗಣೇಶನ್, ಸಾವಿತ್ರಿ, ಪುನೋರಮಾ, ಮುತ್ತುರಾಮನ್

SHAKTI SUDHA

A Superb Tonic



[ಗೋರಕ್ಷಣ ಪ್ರಾಜೆಕ್ಟಿನ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by the Proprietor
Dharma Prachara Nirata M S Krishna Rao
at the Satyavadi Press Ramarajapuram Mysore 4